ಆಫೀಸ್‌ಗಳು ಆಗಲಿ, ಎಲ್ಲಾ ಕಡೆಗೆ ಸರಿಯಾದ ರೀತಿಯಲ್ಲಿ ಕೆಲಸ ನಡೆಯುತ್ತದೆ. ನಾವುಬಂದ ಮೇಲೆ ಏನು ಮಾಡಿದ್ದೀರಿ ಎಂದು ಕೇಳಿದರು. ನಾವು ಬಂದ ಮೇಲೆ ಕೂಡ ಆ ಕೆಲಸವನ್ನು ಮುಂದುವರಿಸಿಕೊಂಡು ಹೋಗಿದ್ದೇವೆ. ಹೆಚ್ಚಿನ ಹಣ ಕೊಡುತ್ತೇವೆ. ಕೆಲಸವನ್ನು ಮಾಡಿ ಕೊಡುತ್ತೇವೆ.

ಶ್ರೀ ಆರ್ ಅಶೋಕ್:– ಮಾನ್ಯ ಅಧ್ಯಕ್ಷರೇ, ವೀರಪ್ಪನ್‌ನನ್ನು ಹಿಡಿಯುವುದರಲ್ಲಿ ಆ ಎಸ್.ಟಿ.ಎಫ್ ನವರು ತಮ್ಮ ಸಾಹಸ ತೋರಿಸಿದ್ದಾರೆ. ಅವರಿಗೆ ಕೂಡುತ್ತೇನೆ, ಕೊಡುತ್ತೇನೆ ಅಂತ ಹೇಳಿ ಇನ್ನೂ ಹಣ ಬಿಡುಗಡೆ ಮಾಡಿಲ್ಲ. ದಯವಿಟ್ಟು ನನ್ನ ಕ್ಷೇತ್ರದಲ್ಲಿ ಸುಮಾರು 5 ಸಾವಿರ ಜನ ಇದ್ದಾರೆ. ಆ ಕಡೆ ಹೋದಾಗೆಲ್ಲ ನಮ್ಮನ್ನು ಬಿಡುವುದಿಲ್ಲ ದಯವಿಟ್ಟು ಅವರಿಗೆ ಏಕೆಂದರೆ ಆ ಸಾಹಸ ತೋರಿಸಿದ್ದಾರೆ. ತಮಿಳುನಾಡು ಸರ್ಕಾರ ಕೊಟ್ಟುಬಿಟ್ಟಿದೆ. ನಾವು ಕೊಟ್ಟಿಲ್ಲ ಅದಕ್ಕೋಸ್ಕರ ದಯವಿಟ್ಟು ತಾವು ಮನಸ್ಸು ಮಾಡಬೇಕು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 5054
ಸದಸ್ಯರ ಹೆಸರು : ಶ್ರೀ ಅಶೋಕ್, ಆರ್.
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಬೆಂಗಳೂರು ನಗರ ಜಿಲ್ಲೆಯಲ್ಲಿ ನಗರಸಭೆ ವ್ಯಾಪ್ತಿಯ ಕುಡಿಯುವ ಕಾವೇರಿ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ತಡವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಸರ್ಕಾರದ ಗಮನಕ್ಕೆ ಬಂದಿದೆ
ಆ.	ಹಾಗಿದ್ದಲ್ಲಿ ಕಾವೇರಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ತಡವಾಗಿರಲು ಕಾರಣಗಳೇನು ?	ಕರ್ನಾಟಕ ಸರ್ಕಾರವು ದಿನಾಂಕ : 26–12–2003 ರಂದು ಏಳು ನಗರಸಭೆ ಮತ್ತು ಒಂದು ಪುರಸಭೆ ಪ್ರದೇಶಗಳಿಗೆ ಕಾವೇರಿ ನೀರು ಮತ್ತು ಒಳಚರಂಡಿ ಸೌಲಭ್ಯ ಕಲ್ಪಿಸಲೋಸುಗ ರೂ. 658.64 ಕೋಟಿಗೆ

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
		ಅನುಮೋದನೆ ನೀಡಲಾಗಿದೆ. ತದನಂತರ ಮಂಡಳಿಯು ಯೋಜನೆಗೆ ಬೇಕಾದ ಅಂದಾಜು ಪಟ್ಟಿಯನ್ನು (ನೀರು ಪೂರೈಕೆ ಕಾಮಗಾರಿಗಳಿಗೆ ಮಾತ್ರ) ತಯಾರಿಸಿ ಕಾಮಗಾರಿಗೆ ಟೆಂಡರು ಗಳನ್ನು 1-1-2004 ರಂದು ಕರೆದು ಪರಿಶೀಲಿಸಲಾಗಿ ಟೆಂಡರಿನ ದರಗಳು ಬಹಳ ಹೆಚ್ಚು ಇದ್ದುದರ ಕಾರಣ ಟೆಂಡರನ್ನು ವಜಾ ಮಾಡಿ ಮರು ಟೆಂಡರನ್ನು ದಿನಾಂಕ 16-11-2004 ರಂದು ಕರೆದು ಪರಿಶೀಲಿಸಿ ಕಾಮಗಾರಿಗಳನ್ನು ದಿನಾಂಕ : 07-04-2005 ರಂದು ಗುತ್ತಿಗೆದಾರರಿಗೆ ವಹಿಸಲಾಗಿದೆ
ಇ.	ಯಾವಾಗ ಪ್ರಾರಂಭ ಮಾಡ ಲಾಗುವುದು ? ಯಾವಾಗ ಪೂರ್ಣ ಗೊಳ್ಳುವುದು ? (ವಿವರ ನೀಡುವುದು)	ಬೆಂಗಳೂರು ನಗರ ಸುತ್ತಮುತ್ತಲಿನ ಏಳು ನಗರಸಭೆ ಹಾಗೂ ಒಂದು ಪುರಸಭೆಗೆ ಕಾವೇರಿ ನೀರು ಪೂರೈಸುವ ಕಾಮಗಾರಿ ಗಳನ್ನು ಗುತ್ತಿಗೆದಾರರಿಗೆ ಏಪ್ರಿಲ್, 2005ರಲ್ಲಿ ವಹಿಸಿಕೊಡಲಾಗಿದೆ ಮತ್ತು ಜೂನ್, 2005 ತಿಂಗಳಲ್ಲಿ ಕಾಮಗಾರಿಗಳು ಪ್ರಾರಂಭವಾಗಿರುತ್ತದೆ. ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು 18 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ಶ್ರೀ ಎನ್ ಧರ್ಮಸಿಂಗ್ :– ಮಾನ್ಯ ಅಧ್ಯಕ್ಷರೇ, ಬೇರೆ ಸಂದರ್ಭದಲ್ಲಿ ಬೇಡಿಕೆ ಬರುತ್ತಿದೆ. ಬೇಡಿಕೆಗಳಿಗೆ ಉತ್ತರ ಕೊಡುವ ಸಂದರ್ಭದಲ್ಲಿ ನಾನು ಉತ್ತರ ಕೊಡುತ್ತೇನೆ.

ಶ್ರೀ ಆರ್ ಅಶೋಕ್:– (ಉತ್ತರಹಳ್ಳಿ) ಮಾನ್ಯ ಅಧ್ಯಕ್ಷರೇ, ಬೆಂಗಳೂರು ಸುತ್ತ ಇರತಕ್ಕಂಥ ನಗರಸಭೆಗಳಿಗೆ 658.64 ಕೋಟಿ ರೂಪಾಯಿಗಳಲ್ಲಿ ಕಾವೇರಿ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಗೋಸ್ಕರ ಹಿಂದೆ ಸರ್ಕಾರ ಒಂದು ಪ್ಲಾನ್ ಅನ್ನು ಮಾಡಿ ಅದರ ಮುಖಾಂತರ ಬೆಂಗಳೂರು ಸುತ್ತ ಬರತಕ್ಕಂಥ ಈ ಬಡಾವಣೆಗಳಿಗೆ ಕಾವೇರಿ ನೀರು ಮತ್ತು ಒಳಚರಂಡಿ ವ್ಯವಸ್ಥೆ ಮಾಡಬೇಕು ಅಂತ

ಒಂದು ಮಾಸ್ಟರ್ ಪ್ಲಾನ್ ಅನ್ನು ಮಾಡಿ ಬಹಳ ವರ್ಷ ಈ ಸದನದಲ್ಲಿಯೇ ಬಹಳ ಹೋರಾಟ ಮಾಡಿ ಅದು ಆಗಬೇಕು ಎನ್ನುವ ಒಂದು ಮಾತನ್ನು ಮಾನ್ಯ ಸರ್ಕಾರವೂ ಹೇಳಿತ್ತು, ನಾವೂ ಹೇಳಿದ್ದೆವು, ಆದರೆ ಈಗ ಅದನ್ನು ಬದಲಾವಣೆ ಮಾಡಿ ಕಾವೇರಿ ನೀರು ಮಾತ್ರ ತರುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ನೀರಿಗೆ ಮಾತ್ರ ಟೆಂಡರ್ ಅನ್ನು ಸುಮಾರು 262 ಕೋಟಿ ರೂಪಾಯಿಗಳ ಟೆಂಡರ್ ಅನ್ನು ಕಾವೇರಿ ನೀರಿಗೆ ಮಾತ್ರ ಕರೆದಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದು ಈಗ ಕಾವೇರಿ ನೀರು ಹಾಕಬೇಕಾದರೆ ಅಗೆಯುತ್ತಾರೆ. ನೂರು ಅಡಿ ಅಗೆದು ಪೈಪ್ ಹಾಕಬೇಕು. ಈ ಕಾವೇರಿ ನೀರಿಗೆ ಅಗೆಯುವದರಿಂದ ರಸ್ತೆಗಳೆಲ್ಲಾ ಹಾಳಾಗುತ್ತವೆ. ಟಾರ್ ಹಾಕಿರುವುದೆಲ್ಲಾ ಹಾಳಾಗಿ ಹೋಗುತ್ತದೆ. ಮತ್ತೆ ಇನ್ನೊಂದು ಸಲ ಮಂಜೂರಾತಿ ಮಾಡಿ ಒಳಚರಂಡಿ ವ್ಯವಸ್ಥೆ ಮಾಡಲು ಇನ್ನೊಂದು ವರ್ಷ ಬಿಟ್ಟು ಅಗೆದರೆ ಮತ್ತೆ ರಸ್ತೆ ಹಾಳಾಗುತ್ತದೆ. ಅಂದರೆ ಸರ್ಕಾರಕ್ಕೆ ಸುಮಾರು 50 ರಿಂದ 100 ಕೋಟಿ ರೂಪಾಯಿ ಲಾಸ್ ಆಗುತ್ತದೆ. ಆಗಿರತಕ್ಕಂತ ರಸ್ತೆಗಳೆಲ್ಲಾ ಅದ್ವಾನ ಎದ್ದು ಹೋಗುತ್ತವೆ. ಆದ್ದರಿಂದ ಡಬ್ಬಲ್ ಕೆಲಸ ಆಗುತ್ತದೆ. ಎರಡೆರಡು ಕೆಲಸ ಮಾಡಿದಂತೆ ಆಗುತ್ತದೆ. ಆದ್ದರಿಂದ ದಯವಿಟ್ಟು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತಿದ್ದೇನೆ ಹಿಂದೆ ಏನಾಗಿತ್ತು 658.64 ಕೋಟಿ ರೂಪಾಯಿ ಅದಕ್ಕೆ ತಾವು ಅನುಮೋದನೆ ಕೊಟ್ಟು ಟೆಂಡರ್ ಕರೆಯಬೇಕು ಎನ್ನುವಂತಹ ಒಂದು ಮನವಿಯನ್ನು ಮಾಡುತ್ತಿದೇನೆ. ಇದು ಏಕೆಂದರೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸ್ಥಳೀಯ ನಗರಸಭೆಗಳ ಕಾಂಟ್ರಿಬ್ಯೂಷನ್ ಮಾಡುತ್ತಾರೆ. ಈಗಾಗಲೇ ಒಂದು ಬೂಮ್ಮನಹಳ್ಳಿ ನಗರಸಭೆ ಅವರದ್ದು ಏನು ಕಾಂಟ್ರಿಬ್ಯೂಷನ್ ಬರಬೇಕು 12 ಕೋಟಿ ರೂಪಾಯಿಗಳನ್ನು ಅವರು ಈಗಾಗಲೇ ಪಾವತಿ ಮಾಡಿದ್ದಾರೆ.

ಶ್ರೀ. ಆರ್. ಅಶೋಕ್ :– ಈ ರೀತಿ ನಗರಸಭೆಗಳಿಗೆ ತಮ್ಮ ಏನು ಕಾಂಟ್ರಿಬ್ಯೂಷನ್ ಇದೆ, ಅದನ್ನು ಮಾಡಲು ಸಿದ್ದವಿದ್ದರೂ ಸಹ ಸರ್ಕಾರ ಇದನ್ನು ತಡೆಹಿಡಿದಿರುವುದರಿಂದ, ಏಕೆಂದರೆ, ಬೆಂಗಳೂರು ಬಹಳ ವೇಗವಾಗಿ ಬೆಳೆಯುತ್ತದೆ, ಅಲ್ಲಿ ಸುತ್ತಮುತ್ತವಿರುವ ಜನರಿಗೆ ನಾವು ನಾಗರಿಕ ಸೌಲಭ್ಯವನ್ನು ಕೊಡಬೇಕು, ಒಳಚರಂಡಿ ವ್ಯವಸ್ಥೆ ಬಹಳ ಮುಖ್ಯ, ಅದನ್ನು ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಪರಿಗಣಿಸಬೇಕೆಂದು ಮನವಿ ಮಾಡಿಕೊಳ್ಳುತೇನೆ.

ಶ್ರೀ ಎನ್.ಧರ್ಮಸಿಂಗ್ :– ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ಅಶೋಕ್‌ರವರು ಹೇಳಿದಂತೆ ಬಹಳ ವರ್ಷಗಳ ಹಿಂದಿನದ್ದಲ್ಲ 2003 ರಲ್ಲಿ ಇದಕ್ಕೆ 658 ಕೋಟಿ ರೂಪಾಯಿಗಳನ್ನು ನಿಗದಿ ಮಾಡಲಾಗಿತ್ತು. ಮತ್ತೆ ಏಪ್ರಿಲ್ 1, 2004 ರಲ್ಲಿ ಟೆಂಡರ್ ಕರೆಯಲಾಯಿತು. ಟೆಂಡರ್ ಮೊತ್ತ ಅಂದಾಜಿಗಿಂತ ಮೂವತ್ತು ಪರ್ಸೆಂಟ್ ಜಾಸ್ತಿ ಇದ್ದುದರಿಂದ ರೀಟೆಂಡರ್ ಕರೆದು ಮಹದೇವಪುರ ಕೆಲಸ ಮತ್ತು ಉಳಿದ

ಪಟ್ಟಣಪಂಚಾಯಿತಿಗಳ ಕೆಲಸ ಈಗೆಲ್ಲಾ ಫೈನಲೈಸ್ ಮಾಡಿದ್ದಾರೆ. ಜೂನ್ 2005 ರಲ್ಲಿ ಕೆಲಸ ಪ್ರಾರಂಭವಾಗಿದೆ. 18 ತಿಂಗಳಲ್ಲಿ ಕೆಲಸವಾಗುತ್ತದೆ. ತಾವೇನು ಹೇಳುತ್ತಿದ್ದೀರೆಂದರೆ : ರೋಡ್‌ಗಳು ಹಾಳಾಗುತ್ತವೆ. ಒಟ್ಟಾರೆ 658 ಕೋಟಿ ರೂಪಾಯಿಗಳ ಕೆಲಸ ಮಾಡಬೇಕೆಂದು ಹೇಳುತ್ತಿದ್ದೀರಿ. ಇದರಲ್ಲಿ ಒಟ್ಟಾರೆ 340 ಕೋಟಿ ವಾಟರ್ ಸಪ್ಲೈಗೆ ಮತ್ತೆ ಉಳಿದದ್ದು ಸಿವರೇಜ್‌ಗೆ 340 ಕೋಟಿ ರೋಡ್‌ರಿಪೇರಿಗೂ ಕೂಡ 400 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಕೆಲಸ ಪ್ರಾರಂಭ ಮಾಡುತ್ತೇವೆ. ವಿಶ್ವಬ್ಯಾಂಕಿನ ನೆರವಿನಿಂದ ಇದು ನಡೆಯುತ್ತಿದೆ. ಈ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತದೆ.

ಶ್ರೀ. ಆರ್. ಅಶೋಕ್ :– ತಾವು ಮಾಡಿದ್ದೀರಿ ಸ್ವಾಗತ ಮಾಡುತ್ತೇನೆ. ಈಗಾಗಲೆ ಕೆಲಸ ಪ್ರಾರಂಭವಾಗಿದೆ. ಅದರ ಜೊತೆಗೆ ಯುಜಿಡಿ ಒಳಚರಂಡಿಯು ಆದರೆ ಮುಂದೆ ರಸ್ತೆ ಹಾಳಾಗುವುದನ್ನು ತಡೆಗಟ್ಟಬಹುದು, ಸರ್ಕಾರಕ್ಕೆ 50 ಕೋಟಿ ರೂಪಾಯಿಗಳು ಉಳಿತಾಯವಾಗುತ್ತದೆ.

ಶ್ರೀ ಎನ್. ಧರ್ಮಸಿಂಗ್ :– ಅಶೋಕ್‌ರವರು, ಅಲ್ಲಿ ರಸ್ತೆ ಹಾಳಾಗುತ್ತದೆ ಎಂದು ಹೇಳುತ್ತಿದ್ದಾರೆ. ಒಳಚರಂಡಿ ಕೆಲಸವನ್ನು ಸೈಮಲೇನಿಯಸ್ಲಿ ಪ್ರಾರಂಭ ಮಾಡುತ್ತೇವೆ.

ಶ್ರೀ. ಕಟ್ಟಾಸುಬ್ರಮಣ್ಯನಾಯ್ಡು :– ಇವತ್ತು ಒಳಚರಂಡಿ ವ್ಯವಸ್ಥೆಯ ಬಗ್ಗೆ ಯೋಚನೆ ಮಾಡಿದರೆ, ಏನು ಸಿಡಿಪಿ ಬೆಂಗಳೂರುವರು ಪ್ರೆಸೆಂಟ್ ಮಾಡಿದ್ದಾರೆ. ಅದನ್ನು ನೋಡಿಕೊಂಡರೆ, ಕೆಲವು ಭಾಗದಲ್ಲಿ ಲೋಕಲಿಟಿಯಲ್ಲಿ ಎಲ್ಲಿ ಬಂದಿದೆ, ಎಲ್ಲಿಯು ಒಳಚರಂಡಿ ಮಾಡಲಾಗದಂತಹ ಕೆಲವು ವಾತಾವರಣಗಳು ಇದ್ದಾವೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ ಒಳಚರಂಡಿ ವ್ಯವಸ್ಥೆಗೆ ಒಂದು ಮಾಸ್ಟರ್‌ಪ್ಲಾನ್ ತಯಾರು ಮಾಡದಿದ್ದರೆ ಆಯಾ ಬಡಾವಣೆಗಳಲ್ಲಿ ಒಳಚರಂಡಿ ನೀರು ತುಂಬಿಕೊಂಡು ಮನೆಗಳ ಒಳಗೆ ಹೋಗುವಂತಹ ಒಂದು ಉಪದ್ರವ ಬರುತ್ತದೆ. ಅದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಡಬೇಕು, ಒಳಚರಂಡಿ ವ್ಯವಸ್ಥೆಗೆ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡದಿದ್ದರೆ ಇನ್ನು 20–30 ವರ್ಷ ಬೆಂಗಳೂರುನಗರದಲ್ಲಿರುವ ಮನೆಗಳ ಒಳಗೆಯೆ ಅದೆಲ್ಲವು ಕೂಡ ಬರುವ ವ್ಯವಸ್ಥೆಯಾಗುತ್ತದೆ. ಅದಕೋಸ್ಕರ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್: ಬೆಂಗಳೂರು ಸುತ್ತಲು ಇರತಕ್ಕಂಥ 7 ನಗರಸಭೆಗಳ ಬಗ್ಗೆ ಕೇಳಿದ್ದಾರೆ, ನಿಮ್ಮ ಶಿವಾಜಿನಗರ ಬಗ್ಗೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀ ಕಟ್ಟಾಸುಬ್ರಮಣ್ಯನಾಯ್ಡು :– ಬೆಂಗಳೂರು ಸುತ್ತಲಿರುವ ಸಿಎಂಸಿಗಳಾದ ಕೃಷ್ಣರಾಜಪುರ, ಬ್ಯಾಟರಾಯನಪುರ , ದಾಸರಹಳ್ಳಿ, ಎಲ್ಲಕ್ಕೂ ಸೇರಿಸಿಯೇ ನಾನು

ಹೇಳುತ್ತಿರುವುದು ಯಲಹಂಕದಲ್ಲಿ ಒಳಚರಂಡಿ ವ್ಯವಸ್ಥೆ ಎಲ್ಲಿದೆ ಸರ್? ಬ್ಯಾಟರಾಯನಪುರದಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 5052
ಸದಸ್ಯರ ಹೆಸರು : ಶ್ರೀ ಕೃಷ್ಣಮೂರ್ತಿ ಕೆ.ಎಂ. ಎಂ.ಎಲ್.ಎ.
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಕಡೂರು ಪುರಸಭೆಯ ವ್ಯಾಪ್ತಿಯಲ್ಲಿ ಹೊಸ ಬಡಾವಣೆಗಳು ಕಳದ 3 ವರ್ಷದಲ್ಲಿ ರೂಪುಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?	ಹೌದು
ಆ.	ಹಾಗಿದ್ದಲ್ಲಿ ಈ ಭಾಗವನ್ನು ಹೊಸ ವಾರ್ಡ್‌ಗಳಾಗಿ ಮಾಡಲು ಸರ್ಕಾರದಲ್ಲಿ ಅವಕಾಶ ಮಾಡಲಾಗಿದೆಯೇ?	ಹೊಸ ಬಡಾವಣೆಗಳು ಪುರಸಭೆ ವ್ಯಾಪ್ತಿಗೆ ಸೇರದೇ ಇರುವುದರಿಂದ ಇವುಗಳನ್ನು ವಾರ್ಡ್‌ಗಳಾಗಿ ರಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ
ಇ.	ಈ ಬಗ್ಗೆ ಜನಸಂಖ್ಯೆ ಅನುಸರಿಸಿ ವಾರ್ಡ್ ಮಾಡಲು ಜಿಲ್ಲಾಧಿಕಾರಿಯವರಿಗೆ ಸರ್ಕಾರದ ನಿರ್ದೇಶನ ನೀಡಲಾಗಿದೆಯೇ?(ವಿವರ ನೀಡುವುದು)	ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ಮಾತ್ರ 2001 ರ ಜನ ಗಣತಿ ಅನುಸರಿಸಿ ವಾರ್ಡ್ ಮಾಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.